**ಓ ಎಸ್ ನಂಃ 113/2018**

**ಪಿ. ಡಬ್ಲ್ಯೂ ಃ 1**

**ದಿಃ 04-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ 5 ನೇ ಪ್ರತಿವಾದಿ ಪರ ಶ್ರೀಮತಿ ಪಿ.ಎ.ವಿ ವಕೀಲರಿಂದ**

ಈ ದಾವೆಯನ್ನು ನಾನು ಭಾಗ ಬೇಕು ಎಂದು ಕೇಳಿ ಹಾಕಿದ್ದೇನೆ. ವಾದಪತ್ರದಲ್ಲಿ ಬರೆದ ಎಲ್ಲ ವಿಷಯವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಾನು ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳೆಂದು ತೋರಿಸಲು ಖಾತೆ ಕಂದಾಯದ ರಶೀದಿಗಳನ್ನು ಮತ್ತು ಪಹಣಿಗಳನ್ನು ಹಾಕಿದ್ದೇನೆ. ಸ.ನಂ. 42/1 ರಲ್ಲಿ 1 ಎಕರೆ ಐದೂವರೆ ಗುಂಟೆ , 42/2 ರಲ್ಲಿ 1 ಎಕರೆ 1 ಗುಂಟೆ ಇರುತ್ತದೆ. ದಾವಾ ಐಟಂ ನಂಬರ್ 1 ರ ಚೆಕ್ ಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಮುತ್ತಹನುಮಯ್ಯ ರವರ ಜಮೀನು, ಉತ್ತರಕ್ಕೆ ಚಂದ್ರ ಮತು ಲಂಕೇಶ್ ರವರ ಜಮೀನು ಮತ್ತು ದಕ್ಷಿಣಕ್ಕೆ ಸರ್ಕಾರಿ ರಸ್ತೆ ಇರುತ್ತದೆ. ಉತ್ತರದಲ್ಲಿರುವ ಚಂದ್ರ ಮತ್ತು ಲಂಕೇಶ್ ಇವರು ನನ್ನ ಸಹೋದರರು ಎಂದರೆ ಸರಿ. ಅವರಿಗೆ ಆ ಜಮೀನು ನನ್ನ ತಾತನಿಂದ ಬಂದಿರುತ್ತದೆ. ಚಂದ್ರ ಮತ್ತು ಲಂಕೇಶ್ ಇವರ ಜಮೀನು ಪ್ರತ್ಯೇಕವಾಗಿರುವುದರಿಂದ ಅದನ್ನು ದಾವೆಯಲ್ಲಿ ಸೇರಿಸಿಲ್ಲ.

ವಾದಪತ್ರದಲ್ಲಿ ನಾನು, ಚಂದ್ರ ಮತ್ತು ಲಂಕೇಶ್ ಒಟ್ಟು ಕುಟುಂಬದಲ್ಲಿರುತ್ತೇವೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಚಂದ್ರ ಮತ್ತು ಲಂಕೇಶ್ ಇವರ ಜಮೀನಿನ ಸ.ನ. 42/1 ಇರುತ್ತದೆ. ದಿನಾಂಕ ಃ 19.06.2019 ರಂದು ಚಂದ್ರ ಮತ್ತು ಲಂಕೇಶ್ ರವರು ಆ ಸ್ವತ್ತನ್ನು ಲೇಟ್ ಚನ್ನಯ್ಯ ಅವರ ಮಕ್ಕಳಿಂದ ಕೊಂಡುಕೊಂಡಿದ್ದಾರೆ ಎಂದರೆ ಸರಿಯಲ್ಲ.ಅವುಗಳ ಸ.ನಂ 42/1 ಮತ್ತು 42/2 ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಅವರು 1 ಎಕರೆ 1 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆ.

ಚಂದ್ರ ಮತ್ತು ಲಂಕೇಶ್ ಇವರಿಗೆ ಜಮೀನುಗಳು ಕ್ರಯಕ್ಕೆ ತೆಗೆದುಕೊಂಡಿದ್ದರಿಂದ ಮತ್ತು ತಾತ ಕೊಟ್ಟಿದ್ದರಿಂದ ಬಂದಿರುತ್ತವೆ. ನಾವು ಒಟ್ಟು ಕುಟುಂಬದಲ್ಲಿದ್ದೇವೆ ಎಂದು ತೋರಿಸಲು ಆಧಾರ್ ಕಾರ್ಡ್, ರೇಷನ್ ಕಾರ್ಡ್ ಇವುಗಳನ್ನು ಕೊಟ್ಟಿಲ್ಲ. ಅದರ ಒಟ್ಟು ವಿಸ್ತೀರ್ಣ ಎಷ್ಟು ಎಂದು

ಗೊತ್ತಿತ್ತು, ಆದರೆ ಈಗ ಮರೆತಿದ್ದೇನೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಆರ್ ಟಿ ಸಿ ಯನ್ನು ತೋರಿಸಿ ಸ.ನಂ. 42/1 ಇದು 4 ಎಕರೆ 35 ಗುಂಟೆ ಇದೆ ಎಂದರೆ ಸಾಕ್ಷಿ ಸರಿ ಎಂದು ಹೇಳುತ್ತಾರೆ. ರಾಮಕ್ಕ ಕೋಂ ಕೆಂಪಯ್ಯ ಎಂದರೆ ನಮ್ಮ ತಾಯಿ. ಅವರ ಹೆಸರಿನಲ್ಲಿ 24 1/2 ಗುಂಟೆ ಜಮೀನಿದೆ ಎಂದರೆ ಸರಿ. ಆ ಕ್ರಯಪತ್ರದಲ್ಲಿ 5 ನೇ ಪ್ರತಿವಾದಿ ಹೆಸರಿನಲ್ಲಿ 21 ಗುಂಟೆ ಕ್ರಯ ಎಂದು ತೋರಿಸಿದೆ ಎಂದರೆ ಸರಿ. ಆ ಆರ್ ಟಿ ಸಿ ಯಲ್ಲಿ ಪ್ರತಿವಾದಿ 3 ಮತ್ತು 4 ರವರ ಹೆಸರಿನಲ್ಲಿ 1 ಎಕರೆ 5 1/2 ಗುಂಟೆ ಮತ್ತು ಮುಂದೆ ಕ್ರಯ ಎಂದು ತೋರಿಸಿದ್ದಾರೆ ಎಂದರೆ ಸರಿ. ಆ ಆರ್ ಟಿ ಸಿ ಯಲ್ಲಿ ಬೋಜಣ್ಣ ಎಂಬುವರಿಗೆ 2 ಎಕರೆ ಇದೆ ಎಂದರೆ ಸರಿ, ಆದರೆ ಕ್ರಯ ಆಗಿಲ್ಲ, ನಮ್ಮ ತಂದೆ ಇದ್ದಾಗ ಭಾಗ ತೆಗೆದುಕೊಂಡಿರುವುದು ಎಂದು ಸಾಕ್ಷಿ ಹೇಳುತ್ತಾರೆ. ಎಂ ಆರ್ ನಲ್ಲಿ ಕ್ರಯ ಎಂದು ತೋರಿಸುತ್ತಿದೆ ಎಂದರೆ ಸರಿಯಲ್ಲ. ಅದು ನನಗೆ ಗೊತ್ತಿಲ್ಲದ ಕಾರಣ ಎಲ್ಲಿಯೂ ತಕರಾರು ಕೊಟ್ಟಿಲ್ಲ.

ನಾನು 5 ನೇ ಪ್ರತಿವಾದಿಯ ಮುಟೇಷನ್ ನ್ನು ರದ್ದು ಮಾಡಲು ಕಂದಾಯ ಅಧಿಕಾರಿಗಳಿಗೆ ಯಾವುದೆ ಅರ್ಜಿ ಕೊಟ್ಟಿಲ್ಲ, ಏಕೆಂದರೆ ಆ ವಿಷಯ ನನಗೆ ಗೊತ್ತಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. 5 ನೇ ಪ್ರತಿವಾದಿಯು ಹುಲಿಕಲ್ ಬ್ಯಾಂಕ್ ನಿಂದ ರೂ. 50 ಸಾವಿರಗಳನ್ನು ಸಾಲವಾಗಿ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬ್ಯಾಂಕ್ ನವರು ಸಾಲ ಕೊಡಬೇಕಾದರೆ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಯಾವ ರೀತಿ

ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಬ್ಯಾಂಕ್ ನವರು ದಾಖಲಾತಿಯನ್ನು ಪರಿಶೀಲಿಸುತ್ತಾರೆ ಎಂದರೆ ಸರಿ. ಪಹಣಿಯಲ್ಲಿರುವ ಪ್ರತಿವಾದಿ 1 ರಿಂದ 4 ರವರ ಜಮೀನನ್ನು ನಾನು ಭಾಗ ಕೇಳದೆ ಕೇವಲ 5 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಜಾಗವನ್ನು ಭಾಗದಲ್ಲಿ ಕೇಳಿದ್ದೇನೆ ಎಂದರೆ ಸರಿಯಲ್ಲ. ಎಲ್ಲವನ್ನು ಸೇರಿಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರ್ ಟಿ ಸಿ ಯನ್ನು ನಿ **ಡಿ 1 ಎಂದು ಗುರುತಿಸಲಾಯಿತು.** ನಾನು ಒಟ್ಟು ಕುಟುಂಬದಲ್ಲಿ ಇಲ್ಲದ ಕಾರಣ ಮತ್ತು ಒಟ್ಟಿಗೆ ವ್ಯವಸಾಯ ಮಾಡದ ಕಾರಣ 5 ನೇ ಪ್ರತಿವಾದಿ ಸಾಲ ತೆಗೆದುಕೊಂಡಿರುವುದು ನನಗೆ ಗೊತ್ತಿಲ್ಲ

ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಗೆ ಮದುವೆ ಆಗಿಲ್ಲ, ಹಾಗಾಗಿ ಅವರ ಬಾಳಸಂಗಾತಿಯನ್ನು ವಂಶವೃಕ್ಷದಲ್ಲಿ ತೋರಿಸಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಪತ್ರದಲ್ಲಿ ನಾನು ಹೊನ್ನಗಂಗಯ್ಯ ಇವರಿಗೆ ಮದುವೆ ಆಗಿಲ್ಲ ಎಂದು ಬರೆಯಿಸಿಲ್ಲ ಎಂದರೆ ಸರಿ. ಅದೇ ರೀತಿ ವಂಶವೃಕ್ಷದಲ್ಲಿ ಅವಿವಾಹಿತ ಎಂದು ತೋರಿಸಿಲ್ಲ ಎಂದರೆ ಸರಿ. ಅದರಲ್ಲಿ ನನ್ನ ಗಂಡನ ಹೆಸರು, ಪ್ರತಿವಾದಿ 3 ಮತ್ತು 4 ರವರ ಹೆಂಡತಿಯರ ಹೆಸರು ಬರೆದಿಲ್ಲ ಎಂದರೆ ಸರಿ. ನನಗೆ ತಹಶೀಲ್ದಾರ್ ಕಚೇರಿ ಅಥವಾ ನಾಡ ಕಚೇರಿಯಲ್ಲಿ ವಂಶವೃಕ್ಷದ ಪ್ರಮಾಣಪತ್ರವನ್ನು ಪಡೆಯಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಸುಗ್ಗನಹಳ್ಳಿ ವಾಸವಿಲ್ಲದ ಕಾರಣ ವಂಶವೃಕ್ಷದ ಪ್ರಮಾಣಪತ್ರವನ್ನು ಪಡೆಯಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ನಾನು ಆಗಾಗ್ಗೆ ಬಂದು ಹೋಗಿ ಮಾಡುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ವ್ಯವಸಾಯಕ್ಕೆ ಹಣ ಹಾಕುತ್ತಿದ್ದ ಬಗ್ಗೆ ಮತ್ತು ಪ್ರತಿವಾದಿ 1 ರಿಂದ 4 ರವರಿಗೆ ವ್ಯವಸಾಯದಲ್ಲಿ ಸಹಾಯ ಮಾಡುತ್ತಿದ್ದ ಬಗ್ಗೆ ಯಾವುದೆ ದಾಖಲೆಯನ್ನು ಕೊಟ್ಟಿಲ್ಲ. ಸಾಕ್ಷಿ ಮುಂದುವರೆದ ಹಣ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

ದಿನಾಂಕಃ 27.11.2006 ರಂದು 5 ನೇ ಪ್ರತಿವಾದಿಯು ಜಮೀನನ್ನು ಕೊಂಡುಕೊಂಡಿದ್ದಾರೆ ಎಂದರೆ ಸರಿ. ಅದರಲ್ಲಿ ನನ್ನ ಮದುವೆ ಖರ್ಚಿಗಾಗಿ ಜಮೀನು ಮಾರಾಟ ಮಾಡಿದ್ದಾರೆ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆಯು 2001 ರಲ್ಲಿ ನಡೆದಿದೆ. ಆ ಮದುವೆ ಆಗುವಾಗ ನನ್ನ ತಂದೆ ಜೀವಂತವಾಗಿದ್ದರು. ಮದುವೆಯ ಕಾಲಕ್ಕೆ ನನಗೆ ಏನು ಕೊಟ್ಟಿಲ್ಲ. ದೇವಸ್ಥಾನದಲ್ಲಿ ಮದುವೆ ಮಾಡಿಕೊಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಮದುವೆಯ ಪೋಟೋಗಳು ಮತ್ತು ಸಿ ಡಿ ಗಳು ಮತ್ತು ಮದುವೆಯಾದ ಬಗ್ಗೆ ದೇವಸ್ಥಾನದವರು ಕೊಟ್ಟ ರಶೀದಿಯನ್ನು ಹಾಜರುಪಡಿಸಿಲ್ಲ. 2001 ರಲ್ಲಿ ಮದುವೆಯಾದ ಬಗ್ಗೆ ನಾನು ಯಾವುದೆ ದಾಖಲೆ ಕೊಟ್ಟಿಲ್ಲ, ಆದರೆ ಕೊಡುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. 2001 ರಲ್ಲಿ ನಾನು ಮೈನರ್ ಇದ್ದೇನು ಎಂದರೆ ಸರಿಯಲ್ಲ. 2006 ರಲ್ಲಿ ಮದುವೆಯಾಗಿದ್ದೇನೆ ಎಂದರೆ ಸರಿಯಲ್ಲ. ಕ್ರಯಪತ್ರ ಮಾಡಿಕೊಳ್ಳಬೇಕಾದರೆ 11 ಇ ಸ್ಕೆಚ್ ಗಾಗಿ ಅಳತೆಗಾಗಿ ಬರುತ್ತಾರೆ ಎಂದರೆ ಸರಿ. ಆವಾಗ ನಾನು ತಕರಾರು ಮಾಡಿಲ್ಲ ಎಂದರೆ ಸರಿ, ಏಕೆಂದರೆ ನನಗೆ ಗೊತ್ತಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಮದುವೆಯ ಕಾಲಕ್ಕೆ ನನಗೆ ಹಣದ ರೂಪದಲ್ಲಿ, ಒಡವೆ ರೂಪದಲ್ಲಿ ನನ್ನ ಭಾಗ ಕೊಟ್ಟಿದ್ದರು ಎಂದರೆ ಸರಿಯಲ್ಲ. ಅದನ್ನು ವಿಚಾರ ಮಾಡಿ 5 ನೇ ಪ್ರತಿವಾದಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಮದುವೆಯಾದಾಗಿನಿಂದ ಚೆನ್ನಾಗಿರುತ್ತೇವೆ. ಆ ಕಾರಣಕ್ಕಾಗಿಯೇ ಕೇವಲ 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನನ್ನು ಮಾತ್ರ ಸೇರಿಸಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ನನ್ನ ಸಂಬಂಧಿಕರಲ್ಲ ಎಂದರೆ ಸರಿ. ಪ್ರತಿವಾದಿ 5 ರವರಿಂದ ಹಣ ಹೊಡೆದುಕೊಳ್ಳಬೇಕು ಮತ್ತು ಆಸ್ತಿ ಹೊಡೆದುಕೊಳ್ಳಬೇಕು ಎನ್ನುವ ಕಾರಣಕ್ಕೆ ನಾನು ಮತ್ತು ಉಳಿದ ಪ್ರತಿವಾದಿಗಳು ಸೇರಿ ಒಂದು ಸುಳ್ಳು ದಾವೆ

ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಲಂಕೇಶ್ ಮತ್ತು ಚಂದ್ರ ಇವರ ಹೆಸರಿನಲ್ಲಿದ್ದ ಆಸ್ತಿಗಳನ್ನು ಸೇರಿಸದೆ ಪ್ರತಿವಾದಿ 5 ರವರಿಗೆ ಸೇರಿದ ಆಸ್ತಿಗಳನ್ನು ಮಾತ್ರ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. 1 ಎಕರೆ 5 1/2 ಗುಂಟೆ ಪೈಕಿ 5 ನೇ ಪ್ರತಿವಾದಿಗೆ 21 ಗುಂಟೆ ಜಮೀನು ಮಾತ್ರ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ನಮ್ಮ ತಾಯಿಯ ಜಮೀನು ಇದೆ ಎಂದು ಬರೆದಿದೆ ಎಂದರೆ ಸರಿ. 2 ನೇ ಐಟಂ ಜಮೀನಿನಲ್ಲಿ ಸ.ನಂ. 42/1 ಇದೆ ಎಂದರೆ ಸರಿ. ಉತ್ತರಕ್ಕೆ ಚಂದ್ರ ಮತ್ತು ಲಂಕೇಶ್ ಇವರ ಜಮೀನಿರುತ್ತದೆ ಎಂದರೆ ಸರಿ. 5 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಪತ್ರವನ್ನು ನಾವು ತಿದ್ದುಪಡಿ ಮಾಡಿಲ್ಲ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿಯು ಕ್ರಯಕ್ಕೆ ತೆಗೆದುಕೊಂಡ ನಂತರ ಜಮೀನನ್ನು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಎಸ್ ಬಿ ಐ ನಿಂದ ಸಾಲ ಪಡೆದುಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ದಾವೆ ಹಾಕಿದ ನಂತರ 5 ನೇ ಪ್ರತಿವಾದಿ ಪಹಣಿಗಳನ್ನು ನಾನು ನೋಡಿದ್ದೇನೆ. 5 ನೇ ಪ್ರತಿವಾದಿ ಕ್ರಯಕ್ಕೆ ತೆಗೆದುಕೊಂಡ ಜಮೀನಿನಲ್ಲಿ ಹಿಪ್ಪೆನೇರಳೆ ಬೆಳೆ ಬೆಳೆದು ರೇಷ್ಮೆ ಹುಳುಗಳನ್ನು ಸಾಕುತ್ತಿದ್ದಾರೆ ಎಂದರೆ ಸರಿಯಲ್ಲ. ಚಾಲ್ತಿ ವರ್ಷದ ಪಹಣಿಗಳನ್ನು ಹಾಜರುಪಡಿಸಲು ಯಾವುದೆ ತೊಂದರೆ ಇರಲಿಲ್ಲ. 5 ನೇ ಪ್ರತಿವಾದಿ ಜಮೀನನ್ನು ಪೋಡಿ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 5 ರವರು ಕ್ರಯಕ್ಕೆ ತೆಗೆದುಕೊಂಡು ಸ್ವತ್ತಿನ ಬಗ್ಗೆ ನಾನು ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ದಾವೆ ಮಾಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**